ದಿನಾಂಕ:18-09-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಬಿ.ಎ.ಎಸ್. ವಕೀಲರಿಂದ:

ನನ್ನ ತಾತನಿಗೆ 4 ಜನ ಮಕ್ಕಳು. ಅವರುಗಳೆಂದರೆ ದೊಡ್ಡನಾಯಕ, ಕೃಷ್ಣನಾಯಕ, ಪುಟ್ಟನಾಯಕ ಮತ್ತು ಸಣ್ಣಮ್ಮ ಎಂದು ಇರುತ್ತವೆ. ದೊಡ್ಡನಾಯಕ ನನ್ನ ತಂದೆ. ನಾನು ಹುಟ್ಟುವ ಪೂರ್ವದಲ್ಲಿ ನಮ್ಮ ತಂದೆಯವರು ವಿಭಾಗ ಮಾಡಿಕೊಂಡಿದ್ದರು. ಸ.ನಂ:63 ರಲ್ಲಿ ಎಷ್ಟು ಎಕರೆ ಜಮೀನು ಇದೆ ಹಾಗೂ ಯಾರು ಯಾರಿಗೆ ಎಷ್ಟು ಪಾಲು ಬಂದಿದೆ ಎಂದು ಹೇಳಲು ಆಗುವುದಿಲ್ಲ. ಸದರಿ ಸ.ನಂಬರಿಗೆ ಸಂಬಂಧಪಟ್ಟ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಸದರಿ ಸ.ನಂಬರಿನಲ್ಲಿ ನನಗೆ ಸೇರಿದ 33 ಗುಂಟೆಗೆ ಸಂಬಂಧಿಸಿದಂತೆ ದಾಖಲೆಯನ್ನು ನೋಡಿದ್ದೇನೆ. ಸ.ನಂ: 63 ರಲ್ಲಿ ಯಾರು ಯಾರಿಗೆ ಎಷ್ಟು ಪೋಡಾಗಿದೆ ಎಂದು ನಾನು ನೋಡಿಲ್ಲ. ಪ್ರತಿವಾದಿಗಳು ಸ.ನಂ: 63/1 ಎ ರಲ್ಲಿ 10 ಗುಂಟೆ ಜಮೀನು ನೊಂದಣಿ ಪತ್ರದ ಪ್ರಕಾರ ನಮಗೆ ಖಾತೆ ಆಗಬೇಕೆಂದು ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಮೇಲ್ಮನವಿಗೆ ನಾನು ತಕರಾರು ಸಲಿಸ್ಲಿಸಿದ್ದೇನೆ. ಸದರಿ ಮೇಲ್ಮನವಿ ವಜಾ ಆಗಿದ್ದು, ಅದರ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ. ಸಣ್ಣಮ್ಮ ನನ್ನ ಸೋದರ ಅತ್ತೆ ಈಗ ತೀರಿಕೊಂಡಿರುತ್ತಾರೆ. ಸದರಿ ಸಣ್ಣಮ್ಮನಿಗೆ ಸ.ನಂ: 63 ರಲ್ಲಿ ಎಷ್ಟು ಎಕರೆ ಪಾಲು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ.ನಂಬರಿನಲ್ಲಿ ಅವರು ಯಾರು ಸ್ವಾಧೀನದಲ್ಲಿ ಇರುವುದಿಲ್ಲ. ಸದರಿ ಸ.ನಂಬರಿನ ಜಮೀನಿನಲ್ಲಿ ಮರಗಳು ಇತ್ತು ಎಂಬುದರ ಬಗ್ಗೆ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಾನು ನ್ಯಾಯಾಲಯಕ್ಕೆ ಪೋಟೊಗಳನ್ನು ಕೊಟ್ಟಿದ್ದೇನೆ ಎಂದಿದ್ದಾರೆ. ಸದರಿ ಪೋಟೊಗಳು ಸ.ನಂ: 63/1 ಎ ರ ಜಮೀನಿಗೆ ಸಂಬಂಧಪಟ್ಟಿದ್ದು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ, ಎಂ ಆರ್ , ಆರ್ ಟಿ ಸಿ ಸಲ್ಲಿಸಿರುತ್ತೇನೆ.

ಈಗ ಸುಮಾರು 15 ವರ್ಷಗಳ ಹಿಂದೆ ಸದರಿ ಜಮೀನಿನಲ್ಲಿ ಯಾವ ಯಾವ ಬೆಳೆ ಬೆಳೆದಿದ್ದೀರಿ ಎಂದರೆ ಸಾಕ್ಷಿಯು ರಾಗಿ , ಹರುಳಿ, ಅಲಸಂದಿ ಗಳನ್ನು ಬೆಳೆದಿದ್ದೇವೆ ಎಂದು ನುಡಿಯುತ್ತಾರೆ. ನಾನು ಬೆಳೆದಿರುವ ಬೆಳೆಗಳು ನಮ್ಮ ಪಹಣಿಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ-1 ನ್ನು ತೋರಿಸಿ

ಅದು 2015-16 ರ ಆರ್ ಟಿ ಸಿ ಯಾಗಿದ್ದು, ಅದರಲ್ಲಿ ಯಾವುದೇ ಬೆಳೆ ಬೆಳೆದಿಲ್ಲ ಎಂದು ನಮೂದಾಗಿದೆ. ಇತ್ತೀಚಿನ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಮುಂದಿನ ಸುನಾವಣೆ ದಿನಾಂಕದಂದು ಹಾಜರುಪಡಿಸುತ್ತೇನೆ ಎಂದಿದ್ದಾರೆ. ಪ್ರತಿವಾದಿಗಳು ಏನು ತಕರಾರು ಹಾಕಿದ್ದಾರೆ ಎಂದರೆ ಸಾಕ್ಷಿಯು ಪ್ರತಿವಾದಿಗಳು 1970-71 ರಲ್ಲಿ 10 ಗುಂಟೆ ಜಮೀನನ್ನು ಕ್ರಯಪತ್ರದ ಮುಖಾಂತರ ಖರೀದಿ ಮಾಡಿಕೊಂಡಿರುತ್ತೇವೆ. ಅದು ನಮಗೆ ಬರಬೇಕು ಎಂದು ತಕರಾರಿನಲ್ಲಿ ಬರೆಸಿರುತ್ತಾರೆ ಎಂದಿದ್ದಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.